1070 (747) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :– ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ನೂತನವಾಗಿ ಪ್ರಾರಂಭಿಸಲ್ಪಟ್ಟ ಎಷ್ಟು ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಕೊಠಡಿ ಮತ್ತು ಇತರೆ ಸೌಲಭ್ಯಗಳನ್ನು ಸೂಕ್ತ ಪ್ರಮಾಣದಲ್ಲಿ ಒದಗಿಸಿಕೊಡಲಾಗಿದೆ;

(ಆ) ಈ ಶಾಲಾ ಕಾಲೇಜಿಗಳಿಗೆ ಸೂಕ್ತ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ನಿಗದಿಪಡಿಸಲಾದ ಅನುದಾನದ ಮೊತ್ತ ಎಷ್ಟು?

ಶ್ರೀ ಬಸವರಾಜ ಹೊರಟ್ಟಿ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

(ಅ) 2006–07ನೇ ಸಾಲಿನಲ್ಲಿ ಮಂಜೂರಾದ 485 ಸರ್ಕಾರಿ ಪ್ರೌಢ ಶಾಲೆಗಳಲ್ಲಿ 299 ಸರ್ಕಾರಿ ಪ್ರೌಢಶಾಲೆಗಳಿಗೆ ರಾಜ್ಯ ವಲಯ ಯೋಜನೆಯಡಿ ಹಾಗೂ ನಬಾರ್ಡ್ ಧನ ಸಹಾಯದೊಂದಿಗಿನ ಆರ್.ಐ.ಡಿ.ಎಫ್–12 ಯೋಜನೆಯಡಿಯಲ್ಲಿ ಒಂದು ಕೊಠಡಿಗೆ 4/–ಲಕ್ಷ ರೂಗಳಂತೆ ಪ್ರತಿ ಶಾಲೆಗೆ 05 ಕೊಠಡಿಗಳಿಗೆ 20/–ಲಕ್ಷ ರೂಗಳ ಅನುದಾನ ಒದಗಿಸಲಾಗಿದೆ.

ಆರ್.ಐ.ಡಿ.ಎಫ್. 13 ರಡಿಯಲ್ಲಿ 141 ಸರ್ಕಾರಿ ಪ್ರೌಢಶಾಲೆಗಳಿಗೆ ಕೊಠಡಿಗಳ ನಿರ್ಮಾಣಕ್ಕಾಗಿ ಪ್ರಸ್ತಾಪಿಸಲಾಗಿದೆ. ಸದರಿ ಅನುದಾನದಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಸಹ ಮಾಡುವಂತೆ ಸೂಚಿಸಲಾಗಿದೆ. ಅನಾವಶ್ಯಕ ವೆಚ್ಚದಡಿ 485 ಸರ್ಕಾರಿ ಪ್ರೌಢ ಶಾಲೆಗಳಿಗೂ ಪಾಠೋಪಕರಣ, ಪೀಠೋಪಕರಣ ಹಾಗೂ ಸಾದಿಲ್ವಾರಿಗಾಗಿ 1.00 ಲಕ್ಷ ರೂಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 2006–07ನೇ ಸಾಲಿಗೆ 199 ಸ.ಪ.ಪೂ ಕಾಲೇಜುಗಳು ಮಂಜೂರಾಗಿದ್ದು, ಇದರಲ್ಲಿ 168 ಸ.ಪ.ಪೂ. ಕಾಲೇಜುಗಳಿಗೆ ಕಟ್ಟಡ ಮತ್ತು ಮೂಲಭೂತ ಸೌಲಭ್ಯವನ್ನು ಒದಗಿಸಲು ನಬಾರ್ಡ್‌ನ ಸಹಯೋಗದೊಂದಿಗೆ ಹಾಗೂ 4202 ಲೆಕ್ಕಶೀರ್ಷಿಕೆಯಡಿ ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಿದ್ದು, ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ.

(ಆ) ಅನಾವರ್ತಕ ವೆಚ್ಚದಡಿ 485 ಸರ್ಕಾರಿ ಪ್ರೌಢ ಶಾಲೆಗಳಿಗೂ ಪಾಠೋಪಕರಣ, ಪೀಠೋಪಕರಣ ಹಾಗೂ ಸಾದಿಲ್ವಾರಿಗಾಗಿ 1.00 ಲಕ್ಷರೂಗಳಂತೆ ಒಟ್ಟು 485 ಲಕ್ಷ ರೂಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2006–07ನೇ ಸಾಲಿಗೆ 210.00 ಲಕ್ಷ ರೂ.ಗಳನ್ನು ಮತ್ತು 2007–08ನೇ ಸಾಲಿಗೂ ಸಹ 210.00 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.